ಡೈರೆಕ್ಟರ್ ಜನರಲ್‌ರವರಿಗೆ ಮತ್ತು ಸ್ಟೇಷನ್ ಡೈರೆಕ್ಟರ್‌ರವರಿಗೆ ಪತ್ರ ಬರೆದು ಕನ್ನಡ ಸುದ್ದಿಯನ್ನು ಕೇಳುವಂತೆ ಓದಬೇಕೆಂದು ತಿಳಿಸಿ. ಹಾಗೆಯೇ ಕನ್ನಡದಲ್ಲಿ ಸುದ್ದಿ ಓದತಕ್ಕಂಥದ್ದು ಬೆಂಗಳೂರಿಗೆ ಶಿಫ್ಟ್ ಮಾಡತಕ್ಕಂಥಾದ್ದೂ ಕೂಡ ಆಗಬೇಕು. ಇದನ್ನು ದೆಹಲಿಯಿಂದ ಏಕೆ ಓದಬೇಕು? ಇವತ್ತಿನ ದಿವಸ ಇನ್‌ಫರ್ಮೇಶನ್ ಸಿಸ್ಟಮ್ ಚೆನ್ನಾಗಿ ಬೆಳೆದಿದೆ. ಆದ್ದರಿಂದ, ದೆಹಲಿಯ ಬದಲಾಗಿ ಬೆಂಗಳೂರಿನಿಂದಲೇ ಸುದ್ದಿಯನ್ನು ಓದತಕ್ಕಂಥ ವ್ಯವಸ್ಥೆ ಮಾಡಿದರೆ ಸ್ವಲ್ಪವಾದ ಇಂಪಾದ ಕನ್ನಡವಾದರೂ ರೇಡಿಯೊ ಮೂಲಕ ಬರತಕ್ಕಂಥ ವ್ಯವಸ್ಥೆ ಮಾಡಬೇಕೆಂದು ತಮ್ಮಲ್ಲಿ ಮನವಿ ಮಾಡುತ್ತಾ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ, ಕುಟುಂಬ ಕಲ್ಯಾಣ ಮತ್ತು ವಾರ್ತಾ ಸಚಿವರು):- ಮಾನ್ಯ ಅಧ್ಯಕ್ಷರೆ, ಈ ವಿಚಾರದಲ್ಲಿ ಸಂಬಂಧಪಟ್ಟವರಿಗೆ ಪತ್ರ ಬರೆದು ಸರಿಯಾದ ವ್ಯವಸ್ಥೆ ಮಾಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಇ) ಸ್ವಯಂಘೋಷಿತ ಆಸ್ತಿ ತೆರಿಗೆ ಪದ್ಧತಿಯನ್ನು ಪುನರ್ ವಿಮರ್ಶೆ ಮಾಡುವ ಬಗ್ಗೆ

+ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ):- ಮಾನ್ಯ ಅಧ್ಯಕ್ಷರೆ, ಕಳೆದ ಒಂದು ವಾರದಿಂದ ಈ ಒಂದು ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೇಳುತ್ತಿದ್ದೆ. ತಾವು ಈಗ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನರ್ಪಿಸುತ್ತೇನೆ. ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ಧತಿ ಪುನರ್ ವಿಮರ್ಶೆಗೆ ಒಳಪಟ್ಟಿರುವುದರಿಂದ ಮತ್ತೆ ಹೊಸದಾಗಿ ಮಸೂದೆಯನ್ನು ಇವತ್ತು ತರುತ್ತೇವೆಂದು ಸರ್ಕಾರದವರು ಒಪ್ಪಿಕೊಂಡಿದ್ದಾರೆ. ಇದರ ಒಂದು ಡ್ರಾಫ್ಟ್ ಕೂಡ ಸಿದ್ಧವಾಗುತ್ತಿದೆ ಎನ್ನತಕ್ಕಂಥದ್ದು ನನಗೆ ತಿಳಿದು ಬಂದಿದೆ. ನಮ್ಮ ರಾಜ್ಯದಲ್ಲಿರತಕ್ಕಂಥ ಎಲ್ಲಾ ನಗರ ಪ್ರದೇಶ ಮತ್ತು ಪಟ್ಟಣ ಪ್ರದೇಶ ಹಾಗೂ ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯತಿಗಳಲ್ಲಿ ಇವತ್ತಿನದಿವಸ ಸಾಕಷ್ಟು ಗೊಂದಲ ನಿರ್ಮಾಣವಾಗಿದೆ.

12.40 ಪಿಎಂ

ಹಿಂದಿನ ತೆರಿಗೆಯ ವ್ಯವಸ್ಥೆ ರದ್ದಾಗಿದೆ. ಹೊಸ ಒಂದು ಸ್ವಯಂಘೋಷಿತ ಆಸ್ತಿ ತೆರಿಗೆ ಪದ್ಧತಿ ಜಾರಿಗೆ ಬಂದಿದೆ. ಆದರೆ ಸರ್ಕಾರ ಏನು ಹೇಳಿದೆ, ಹೊಸ ಪದ್ಧತಿಯನ್ನು ನಾವು ರದ್ದುಗೊಳಿಸಿ ಅದನ್ನು ಪುನರ್ ವಿಮರ್ಷೆಗೆ ಒಳಪಡಿಸಿ ಈಗ ಒಂದು ಹೊಸ ಮಸೂದೆಯನ್ನು ತರುತ್ತದೆಂದು ಹೇಳಿದೆ, ಹಾಗಾಗಿ ಸರ್ಕಾರ ಈಗ ಹೊಸ ಮಸೂದೆಯನ್ನು ತರಲಿ, ಅದನ್ನು ನಾವು ಸ್ವಾಗತ ಮಾಡುತ್ತೇವೆ, ಅದನ್ನು ಅಗತ್ಯ ತಿದ್ದುಪಡಿಯೊಂದಿಗೆ ತರಲಿ, ಈಗ ರಾಜ್ಯದಲ್ಲಿ ಜನ ಯಾವ ರೀತಿಯಾದ ತೆರಿಗೆಯನ್ನು ಕಟ್ಟಬೇಕು ಎನ್ನುವುದರ ಬಗ್ಗೆ ಗೊಂದಲದಲ್ಲಿದ್ದಾರೆ, ಈ ವರ್ಷದ ತೆರಿಗೆಯನ್ನು ಕಟ್ಟುತ್ತಿದ್ದಾರೆ, ದಿನನಿತ್ಯ ಜಾಹೀರಾತುಗಳು ಬರುತ್ತಿವೆ, ನಗರಸಭೆ ಹಾಗೂ ಪುರಸಭೆ ಮತ್ತು ಪಟ್ಟಣ ಪಂಚಾಯಿತಿಯಿಂದ, ನೀವು ಹೊಸ ತೆರಿಗೆ ಪದ್ಧತಿಯಲ್ಲಿ ನೀವು ತೆರಿಗೆಯನ್ನು ಕಟ್ಟದೇ ಹೋದರೆ ನಿಮ್ಮ ಮೇಲೆ ದಂಡವನ್ನು ವಿಧಿಸುತ್ತೇವೆಂದು ಹೇಳುತ್ತಿದ್ದಾರೆ. ಹಾಗಾಗಿ ಇಲ್ಲಿ ಹೊಸ ಮಸೂದೆ ಬಂದಿಲ್ಲ, ಹಳೆಯ ಮಸೂದೆ ಕಾನೂನಿನ ಪ್ರಕಾರ ಅಲ್ಲಿ ಅನ್ವಯವಾಗುತ್ತಿದೆ. ಜನರು ದಂಡಕ್ಕೆ ಭಯಭೀತರಾಗಿದ್ದಾರೆ. ಸರ್ಕಾರದಿಂದ ನೀವು ನನಗೆ ಸ್ಪಷ್ಟವಾದ ಒಂದು ನಿರ್ದೇಶನವನ್ನು ಕೊಡಿಸಬೇಕು ಮತ್ತು ಸರ್ಕಾರ ಕೊಡಬೇಕು. ನಾವೇನು ಆಪೇಕ್ಷೆ ಪಡುತ್ತಿದ್ದೇವೆಂದರೆ ಈಗ ಅವರು ಹೊಸ ತೆರಿಗೆಯನ್ನು ಎಷ್ಟು ಕಟ್ಟುತ್ತಾರೋ ಅಷ್ಟನ್ನು ಕಟ್ಟಿಸಿಕೊಳ್ಳಲಿ. ನಾವು

ಮಸೂದೆಯನ್ನು ಪಾಸ್ ಮಾಡಿದ ನಂತರದಲ್ಲಿ ವ್ಯತ್ಯಾಸವೇನಾಗುತ್ತದೆ ಅದನ್ನು ಮುಂದಿನ ವರ್ಷದಲ್ಲಿ ಕಡಿಮೆ ಬಿದ್ದರೆ ತುಂಬಿಸಿಕೊಳ್ಳಲಿ, ಹೆಚ್ಚಿಗೆ ಬಿದ್ದರೆ ಅದರ ಬಗ್ಗೆ ಮುಂದಿನ ವರ್ಷಕ್ಕೆ ಅಡ್ಜೆಸ್ಟ್ ಮಾಡಿಕೊಳ್ಳಲಿ. ಈ ಒಂದು ಸ್ಪಷ್ಟವಾದ ನಿರ್ದೇಶನವನ್ನು ಸರ್ಕಾರದ ಮತಿಯಿಂದ ಕೊಡಿಸಬೇಕೆಂದು ನಾನು ವಿನಂತಿಯನ್ನು ತಮ್ಮ ಮೂಲಕ ಈ ಸರ್ಕಾರದಲ್ಲಿ ಮಾಡಿಕೊಳ್ಳಲು ಬಯಸುತ್ತೇನೆ. ಇದೊಂದು ಬಹಳ ಪ್ರಮುಖವಾದಂಥ ವಿಷಯವಾಗಿರುವುದರಿಂದ ಇದಕ್ಕೆ ಸರ್ಕಾರ ಸ್ಪಂದಿಸಬೇಕೆಂದು ನಾನು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್(ವಿರೋಧ ಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೆ, ಸರ್ಕಾರ ಇದಕ್ಕೆ ಸ್ಪಂದನೆ ಮಾಡಬೇಕಾಗುತ್ತದೆ. ಮಾನ್ಯ ನಗರಾಭಿವೃದ್ಧಿ ಸಚಿವರು ಇದಕ್ಕೆ ಒಂದು ಅಮೆಂಡ್‌ಮೆಂಟ್‌ನ್ನು ತರುತ್ತೇವೆಂದು ಹೇಳಿದರು. ಅದನ್ನು ಇದುವರೆಗೂ ತರಲಿಲ್ಲ. ಕೇವಲ ಇನ್ನು 4-5 ದಿವಸ ಮಾತ್ರ ಸೆಷನ್ ಉಳಿದಿದೆ, ಇದೊಂದು ಗೊಂದಲ ಸಾರ್ವಜನಿಕರಲ್ಲಿ ನಿರ್ಮಾಣವಾಗಿ, ಆ ಗೊಂದಲ ಮುಂದುವರೆಯುತ್ತಿದೆ. ಇದರ ಬಗ್ಗೆ ಸರ್ಕಾರ ಸ್ಪಷ್ಟನೆ ಮಾಡಬೇಕಾಗುತ್ತದೆ. ಇವತ್ತು ಹೊಸ ವಿಧಾನವನ್ನು ಅಡಾಪ್ಟ್ ಮಾಡಬೇಕೋ ಅಥವಾ ಬೇಡವೋ? ಈ ಒಂದು ಗೊಂದಲ ನಿರ್ಮಾಣವಾಗಿರುವುದರಿಂದ ಇದರ ಬಗ್ಗೆ ಸರ್ಕಾರ ಏನಾದರೂ ಉತ್ತರವನ್ನು ಹೇಳಬೇಕಾಗುತ್ತದೆ.

ಅಧ್ಯಕ್ಷರು:- ಸರ್ಕಾರ ಬೇಕಾದರೆ ಉತ್ತರ ಹೇಳಬಹುದು; ಇಲ್ಲದಿದ್ದರೆ, I cannot compel the Government to reply for this.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಮಾನ್ಯ ಅಧ್ಯಕ್ಷರೆ, ನೀವು.....

***

ಅಧ್ಯಕ್ಷರು:- ಮಾನ್ಯ ಕಾಗೋಡು ತಿಮ್ಮಪ್ಪನವರು ಇದ್ದರು ಅವರು ಉತ್ತರವನ್ನು ಹೇಳಿದರು, I have no objection. ಯಾರೂ ಉತ್ತರವನ್ನು ಹೇಳುವವರು ಇರದಿದ್ದರೆ ನಾನೇನು ಮಾಡಲಿ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಇಲ್ಲಿ ಹಿರಿಯ ಸಚಿವರುಗಳು ಎಲ್ಲರೂ ಇದ್ದಾರೆ. ಮಾನ್ಯ ಮುಖ್ಯಮಂತ್ರಿಗಳನ್ನು ಒಳಗೊಂಡಂತೆ ಎಲ್ಲಾ ಸಚಿವರು ಇದ್ದಾರೆ. ಮಾನ್ಯ ಪೌರಾಡಳಿತ ಸಚಿವರು ಇದ್ದಾರೆ. ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರು ಇದ್ದಾರೆ.

ಅಧ್ಯಕ್ಷರು:- ನಾನು ಏನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಮಾನ್ಯ ಅಧ್ಯಕ್ಷರೆ, ಸರ್ಕಾರ ಇದಕ್ಕೆ ಉತ್ತರವನ್ನು ಕೊಡಬೇಕಾಗುತ್ತದೆ. ಇದು ಇಡೀ ರಾಜ್ಯದ ಜನತೆಯ ಗಂಭೀರವಾಗಿರತಕ್ಕಂಥ ಒಂದು ಸಮಸ್ಯೆ. ನಾನು ಯಾವುದೋ ಒಂದು ನನ್ನ ಕ್ಷೇತ್ರದ ಸಮಸ್ಯೆಯನ್ನು ಹೇಳಲಿಲ್ಲ.

ಅಧ್ಯಕ್ಷರು:- ಸರ್ಕಾರ ಇಚ್ಛಿಪಟ್ಟರೆ ಉತ್ತರ ಹೇಳಬಹುದು ಇಲ್ಲದಿದ್ದರೆ ಇಲ್ಲ. ಶ್ರೀ ವಿಶ್ವೇಶ್ವರ ಹೆಗಡೆಯವರೆ, ನಾನು ನಿಮ್ಮನ್ನು ಎಲೋ ಮಾಡಿದ್ದೇ ತಪ್ಪಾಯಿತು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಈ ಸದನದಲ್ಲಿ ರಾಜ್ಯದ ಜನರ ಸಮಸ್ಯೆಯನ್ನು ಉಲ್ಲೇಖ ಮಾಡುವುದೇ ತಪ್ಪಾಯಿತೆಂದರೆ, ನೀವು ಹೇಳಿ ಬಿಡಿ, ನಾವ್ಯಾರೂ ಇಲ್ಲಿ ಆಯ್ಕೆಯಾಗಿ ಬರಬೇಡಿ ಎಂದು.

(ಗೊಂದಲ)

Mr. Speaker:- I cannot compel the Government to answer.

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು):- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಧೋರಣೆ ಏನಿದೆ ಅದು ಅಷ್ಟು ಮೆಚ್ಚತಕ್ಕಂಥ ಧೋರಣೆಯಲ್ಲ. ತಾವು ಮುಕ್ತವಾದಂಥ ರೀತಿಯಲ್ಲಿ ಅವಕಾಶವನ್ನು ಕೊಡುತ್ತಾ ಬಂದಿರುತ್ತೀರಿ, ಈಗ ಮಾನ್ಯ ಸದಸ್ಯರಾದಂಥ ಬೈರೇಗೌಡರು ಆಕಾಶವಾಣಿಯ ವಿಷಯವಾಗಿ ರೈಸ್ ಮಾಡಿದರು, ಮಾನ್ಯ ಇನ್‌ಫಾರ್ಮೇಷನ್ ಮಿನಿಸ್ಟರ್ ಇದ್ದರು, ತತ್‌ಕ್ಷಣ ಸ್ಪಂದಿಸಲಿಕ್ಕೆ ಸಾಧ್ಯವಾಯಿತು. ಈಗ ಮಾನ್ಯ ಸದಸ್ಯರು ಹೇಳುತ್ತಿದ್ದಾರೆ, ಈಗ ಇಲ್ಲಿ ಸಂಬಂಧಪಟ್ಟ ಸಚಿವರು ಇಲ್ಲ, ಸಂಬಂಧಪಟ್ಟ ಸಚಿವರಿಗೆ ಮೊದಲೇ ನೋಟೀಸ್ ಕೊಟ್ಟು, ನಾನು ಇದನ್ನು ರೈಸ್ ಮಾಡುತ್ತಿದ್ದೇನೆ, ತಾವು ಸದನದಲ್ಲಿ ಇರಬೇಕು ಎಂದು ತಾವು ಮುನ್ಸೂಚನೆಯನ್ನು ಕೊಟ್ಟಿದ್ದರೆ, ಅನುಕೂಲವಾಗುತ್ತಿತ್ತು.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ಮುನ್ಸೂಚನೆಯ ನೋಟೀಸನ್ನು ಕೊಟ್ಟಾಗಿದೆ, ಇದೊಂದು ದೊಡ್ಡ ಸಮಸ್ಯೆಯಾಗಿದೆ.

ಶ್ರೀ ಎಸ್.ಎಂ.ಕೃಷ್ಣ:- ಮಾನ್ಯ ಅಧ್ಯಕ್ಷರೆ, ಶೂನ್ಯವೇಳೆಯಲ್ಲಿ ಇಂತಹ ವಿಚಾರಗಳನ್ನು ಎತ್ತಿದಾಗ ಮಾನ್ಯ ಅಧ್ಯಕ್ಷರು ಹೇಳಿ ಕಳುಹಿಸಿ ಸಂಬಂಧಪಟ್ಟ ಸಚಿವರನ್ನು ಕರೆಸಿ ಉತ್ತರ ಕೊಡಿಸಬಹುದು ಅಥವಾ ಅವರಿಂದ ಹೇಳಿಕೆಯನ್ನು ಪಡೆಯಬಹುದು. ತಾವು ಇದರ ಬಗ್ಗೆ ರೂಲಿಂಗ್ ಏನು ಕೊಟ್ಟಿದ್ದೀರಿ, ಅದು ಸಮ್ಮತವಾದಂಥ ರೂಲಿಂಗ್, ಏಕೆಂದರೆ ನಾವು ಯಾವುದಕ್ಕೆ ರೆಡಿಯಾಗಿ ಕುಳಿತಿರುತ್ತೇವೆ ಅದರ ಬಗ್ಗೆ ಹೇಳಬಹುದು, ಸ್ಫೂರ್ತಿ ಸಂಸ್ಥೆಯ ಬಗ್ಗೆ ಮಾನ್ಯ ಸಚಿವರಾದ ಶ್ರೀ ಕಾಗೋಡು ತಿಮ್ಮಪ್ಪನವರಿಗೆ ತಿಳುವಳಿಕೆ ಇತ್ತು, ಅದಕ್ಕೆ ಉತ್ತರ ಗೊತ್ತಿರುವುದರಿಂದ ಅವರು ತಕ್ಷಣ ಸ್ಪಂದಿಸಿದರು. ನಾವು ಮಲಗಿದ್ದೇವೆಯೋ ಅಥವಾ ಎಚ್ಚರವಾಗಿದ್ದೆವೆಯೋ ಎನ್ನುವುದರ ಬಗ್ಗೆ ನಮಗೆ ಜನ ತೀರ್ಮಾನವನ್ನು ಕೊಡುತ್ತಾರೆ. ಆದ್ದರಿಂದ ಅವರು ಏನು ಇನ್ವಿನ್ಯುಯೇಷನ್ ಮಾಡಿದರು ಅದನ್ನು ಕಡತದಿಂದ ತೆಗೆಸಿ ಹಾಕಬೇಕೆಂದು ನಾನು ಆಗ್ರಹಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು:- ಆಗಲಿ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೆ, ಇವತ್ತು ಮಾನ್ಯ ಮುಖ್ಯಮಂತ್ರಿಗಳು ಏನು ಹೇಳಿದರು, ಶೂನ್ಯವೇಳೆಯಲ್ಲಿ ವಿಷಯವನ್ನು ಪ್ರಸಾಪ ಮಾಡುವಂಥದ್ದು ಕಂಪಲ್ಸರಿಯಾಗಿ ಉತ್ತರವನ್ನು ನಾವು ಅವರಿಂದ ತೆಗೆದುಕೊಳ್ಳಬೇಕೆಂದು ಅಲ್ಲ, ಅದು ನಮಗೂ ಅರ್ಥವಾಗುತ್ತದೆ. ಇದೊಂದು ರಾಜ್ಯದ ಜನರ ಜ್ವಲಂತ ಸಮಸ್ಯೆ ಇರುವಾಗ, ಎಸ್‌ಎಎಸ್ ಬಗ್ಗೆ, ಇವತ್ತು ಚರ್ಚೆ ನಡೆಯುತ್ತಿರುವಂಥ ಒಂದು ಸಂದರ್ಭದಲ್ಲಿ ಮಾನ್ಯ ನಗರಾಭಿವೃದ್ಧಿ ಸಚಿವರು, ನಾವು ಅಮೆಂಡ್‌ಮೆಂಟ್ ಬಿಲ್ ತರುತ್ತೇವೆಂದು ಸದನದಲ್ಲಿ ಪ್ರಾಮೀಸ್ ಮಾಡಿದ್ದರು; ಅದರ ಬಗ್ಗೆ ಏನೂ ಹೇಳುವುದಿಲ್ಲವೆಂದರೆ ಹೇಗೆ? ಇದರ ಬಗ್ಗೆ ಬಜೆಟ್ ಮೇಲೆ ಮಾತನಾಡುವುದಲ್ಲ, ಇವತ್ತು ನಾವು ಏನು ಹೇಳುತ್ತೇವೆಂದರೆ, ತಕ್ಷಣವೇ ಉತ್ತರವನ್ನು ಕೊಡಿ, ಈಗಲೇ ಅದರ ಬಗ್ಗೆ ಭರವಸೆ ಕೊಡಿ ಎಂದು ಹೇಳುತ್ತಿಲ್ಲ. ಅಟ್‌ಲೀಸ್ಟ್ ಅದನ್ನು ನಾವು ಗಮನಕ್ಕೆ ತೆಗೆದುಕೊಂಡಿದ್ದೇವೆ, ಅದರ ಬಗ್ಗೆ ನಾವು ಗಮನಹರಿಸುತ್ತೇವೆಂದು ಅಷ್ಟಾದರೂ ಹೇಳುವುದಕ್ಕೆ ಮಾನ್ಯ ಸಚಿವರಿಗೆ ಸೌಜನ್ಯವಿಲ್ಲವಲ್ಲ.

ಶ್ರಿ ಎಸ್.ಎಂ ಕೃಷ್ಣ:- ಇವತ್ತು ಏನು ಈ 120 ಮುನಿಸಿಪಾಲಿಟಿಗಳು ಇವೆ, ಅದರಲ್ಲಿ 80 ಮುನಿಸಿಪಾಲಿಟಿಗಳು ಈಗಾಗಲೇ ಈ ಹೊಸ ಚೌಕಟ್ಟಿನಲ್ಲಿ ಕಂದಾಯವನ್ನು ವಸೂಲು ಮಾಡುತ್ತಿದ್ದಾರೆ, ಇನ್ನು ಕೆಲವೊಂದಕ್ಕೆ ಹೈಕೋರ್ಟಿನಲ್ಲಿ ಸ್ಟೇ ಆಗಿ ನಿಂತಿವೆ.

ಅಧ್ಯಕ್ಷರು:- ಮಾನ್ಯ ವೈ.ಕೆ.ರಾಮಯ್ಯನವರೆ, ತಾವು, ಏಕೆ ಎದ್ದು ನಿಂತಿದ್ದೀರಿ ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಡುತ್ತಿದ್ದಾರೆ. You please come to your seat.

ಶ್ರೀ ಎಸ್.ಎಂ.ಕೃಷ್ಣ- ಸಾಮಾನ್ಯವಾಗಿ ಅಧ್ಯಕ್ಷರಿಗೆ ಬೆನ್ನು ತೋರಿಸಿ ಎದ್ದು ನಿಲ್ಲಬಾರದು. ಅದೊಂದು ಕನ್‌ವೆನ್‌ಷನ್ ನಮ್ಮದು. ಮಾರ್ಚ್ 31ನೇ ತಾರೀಖಿನವರೆಗೆ ಈ ಸದನ ನಡೆಯಬೇಕು ಎಂದು ತಾವು BAC ಯಲ್ಲಿ ತೀರ್ಮಾನವನ್ನು ಮಾಡಿದ್ದೀರಿ. ಆದ್ದರಿಂದ ಮಾನ್ಯ ವಿರೋಧ ಪಕ್ಷದ ನಾಯಕರು ತಾವು ಏನು ಹೇಳಿದ್ದೀರಿ ಅದನ್ನು ನಾನು ಸಂಬಂಧಪಟ್ಟ ಸಚಿವರ ಗಮನಕ್ಕೆ ತರುತ್ತೇನೆ. ಅವರು ನಾಳೆ ಅಥವಾ ನಾಡಿದ್ದು ತಮಗೆ ಸ್ಪಂದಿಸುತ್ತಾರೆ. ಇದೊಂದು ಮುಖ್ಯವಾದಂಥ ವಿಚಾರ ಎನ್ನುವುದರಲ್ಲಿ ಎರಡು ಮಾತಿಲ್ಲ. ಅದನ್ನು ನಾವು ಒಪ್ಪುತ್ತೇವೆ.

ಈ) ರಾಜ್ಯದ ತಂಬಾಕು ಬೆಳೆಗಾರರ ಸಮಸ್ಯೆ

ಶ್ರೀ ಹೆಚ್.ಸಿ. ಬಸವರಾಜು (ಪಿರಿಯಾಪಟ್ಟಣ):- ಮಾನ್ಯ ಅಧ್ಯಕ್ಷರೆ, ರಾಜ್ಯದ ತಂಬಾಕು ಬೆಳೆಗಾರರು ಸಂಕಷ್ಟದಲ್ಲಿರುವುದರಿಂದ ಆ ವಿಷಯದಲ್ಲಿ ತಮಗೆ ಒಂದು ಗಮನ ಸೆಳೆಯುವ ಸೂಚನೆಯನ್ನು ನಾನು ಕಳುಹಿಸಿಕೊಟ್ಟಿದ್ದೆ. ಅದಕ್ಕೆ ಸಂಬಂಧಪಟ್ಟ ಸಚಿವರು ಉತ್ತರವನ್ನು ಕಳುಹಿಸಿ ಕೊಟ್ಟಿದ್ದರೆ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ತಾವು ಅನುಮತಿಯನ್ನು ಕೊಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು:- ಇದು ಗಮನ ಸೆಳೆಯುವ ಸೂಚನೆಯಲ್ಲ, ಈಗ ಇರುವುದು ಶೂನ್ಯವೇಳೆ, ಅದರಲ್ಲಿ ಏನಾದರೂ ಹೇಳುವುದಿದ್ದರೆ ಹೇಳಿ, ಆ ಸಮಯದಲ್ಲಿ ನಿಮ್ಮ ವಿಷಯವನ್ನು ತೆಗೆದುಕೊಳ್ಳೋಣ.

ಶ್ರೀ ಎ. ಮಂಜು(ಅರಕಲಗೂಡು):- ಮಾನ್ಯ ಅಧ್ಯಕ್ಷರೆ, ನಮ್ಮ ಕರ್ನಾಟಕ ರಾಜ್ಯದಲ್ಲಿ ಟೊಬ್ಯಾಕೋ ರಿಜಿಸ್ಟ್ರೇಷನ್ ಸ್ಟಾರ್ಟ್ ಆಗಿರುವುದರಿಂದ ಮಾನ್ಯ ಸಚಿವರು ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳ ಜೊತೆಯಲ್ಲಿ ಸಮಾಲೋಚನೆ ಮಾಡಿಲ್ಲವೆನ್ನುವುದರ ಬಗ್ಗೆ ನಾನು ಗಮನ ಸೆಳೆಯುವುದಕ್ಕೆ ಇಚ್ಛಿಪಡುತ್ತೇನೆ. ಜೊತೆಗೆ ಏನೆಂದರೆ, ನಮ್ಮ ರಾಜ್ಯದಲ್ಲಿ ಹೊಗೆಸೊಪ್ಪನ್ನು ಬೆಳೆಯತಕ್ಕ 49 ಸಾವಿರ ಜನ ರೈತರು ಇದ್ದರೂ ಕೂಡ ಟೊಬ್ಯಾಕೋ ಬೋರ್ಡಿನವರು ನಮ್ಮ ರಾಜ್ಯದ 19 ಸಾವಿರ ಜನ ರೈತರಿಗೆ ಮಾತ್ರ ರಿಜಿಸ್ಟರ್ಡ್ ಗ್ರೋಯರ್ಸ್ ಎಂದು ಕೊಟ್ಟಿರುವುದು, 20 ಸಾವಿರ ಜನ ರೈತರಿಗೆ ಅನ್‌ರಿಜಿಸ್ಟರ್ಡ್ ಗ್ರೋಯರ್ಸ್ ಕೊಟ್ಟು 15 ಪರ್ಸೆಂಟ್ ಹಣವನ್ನು ಟೊಬ್ಯಾಕೋ ಬೋರ್ಡಿನವರು ವಸೂಲ್ಮಾಡುತ್ತಿರುವುದರಿಂದ ನಮ್ಮ ರೈತರಿಗೆ ಸುಮಾರು 11 ಕೋಟಿ ರೂಪಾಯಿಗಳಷ್ಟು ನಷ್ಟವಾಗಿರುವುದು ಕಂಡುಬಂದಿರುತ್ತದೆ. ನಮ್ಮ ಕರ್ನಾಟಕ ರಾಜ್ಯ ಸರ್ಕಾರ ಟೊಬ್ಯಾಕೋ ಬೋರ್ಡಿನವರ ಜೊತೆ ಸಂಪರ್ಕಿಸಿ ಇದರ ಬಗ್ಗೆ ಸೂಕ್ತವಾದ ಸಲಹೆಯನ್ನು ಕೊಡಬೇಕು, ನಮ್ಮಲ್ಲಿ ರಿಜಿಸ್ಟರ್ಡ್ ಗ್ರೋಯರ್ಸ್ ಮತ್ತು ಅನ್‌ರಿಜಿಸ್ಟರ್ಡ್ ಗ್ರೋಯರ್ಸ್ ಎನ್ನುವುದನ್ನು ಬದಲಾವಣೆ ಮಾಡಿ, ಎಲ್ಲಾ ರೈತರನ್ನು ರಿಜಿಸ್ಟರ್ಡ್ ಗ್ರೋಯರ್ಸ್ ಎಂದು ಮಾಡಿ ರೈತರ ಸಮಸ್ಯೆಯನ್ನು ಬಗೆಹರಿಸಬೇಕೆಂದು ನಾನು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ.